ಇ) ಸ್ಥಳೀಯರಿಗೆ ಆದ್ಯತೆ ನೀಡದೆ ಹೊರಗಿನವರಿಗೆ ಮಂಜೂರು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ, ಸ್ಥಳೀಯವರಿಗೆ ಎಷ್ಟು ಜನರಿಗೆ ಕೊಡಲಾಗಿದೆ ಹಾಗೂ ಹೊರಗಿನವರಿಗೆ ಎಷ್ಟು ಜನಕ್ಕೆ ಕೊಡಲಾಗಿದೆ?

ಉ) ಹೊರಗಿನವರಿಗೆ ಕೊಟ್ಟಿರುವ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) 4 (ನಾಲ್ಕು) ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ.

ಆ) 17 ಜನ.

ಇ) ಹೌದು.

ಈ) 3 ಜನ ಸ್ಥಳೀಯರು, 1 ಬೆಂಗಳೂರು.

ಉ) ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಮಂಗಳೂರು ವೆನ್‌ಲಾಕ್ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ಇರುವ "ಡಿ" ವರ್ಗದ ಸಿಬ್ಬಂದಿ ಬಗ್ಗೆ**

349. ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ವೆನ್‌ಲಾಕ್ ಆಸ್ಪತ್ರೆ ಮಂಗಳೂರು ಇಲ್ಲಿ ಎಷ್ಟು ಗ್ರೂಪ್–ಡಿ ನೌಕರರು ಕೆಲಸ ಮಾಡುತ್ತಿದ್ದಾರೆ?

ಆ) ಈ ಆಸ್ಪತ್ರೆಯಲ್ಲಿ ಎಷ್ಟು ಗ್ರೂಪ್–ಡಿ ಹುದ್ದೆ ಖಾಲಿ ಇರುತ್ತದೆ ಮತ್ತು ಯಾವ ದಿನಾಂಕದಿಂದ ಭರ್ತಿ ಮಾಡಿಲ್ಲ?

ಇ) ಯಾವಾಗ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು):–

ಅ) 236.

ಆ) 34 ಹುದ್ದೆಗಳು ಖಾಲಿ ಇರುತ್ತವೆ. 3 ವರ್ಷಗಳಿಂದ ಭರ್ತಿ ಮಾಡಿರುವುದಿಲ್ಲ.

ಇ) ಸರ್ಕಾರ ಮಿತವ್ಯಯ ಆದೇಶ ಸಡಿಲಿಸಿದ ನಂತರ ಹುದ್ದೆಗಳನ್ನು ತುಂಬಲಾಗುವುದು.

**ಬಂಕಾಪುರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.**

557. ಶ್ರೀ ಮಂಜುನಾಥ್. ಸಿ. ಕುನ್ನೂರ್ (ಶಿಗ್ಗಾಂವ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಬಂಕಾಪುರದಲ್ಲಿರುವ ಪಿ.ಹೆಚ್.ಸಿ (ಪ್ರಾಥಮಿಕ ಆರೋಗ್ಯ ಕೇಂದ್ರ)ವನ್ನು 6 ಹಾಸಿಗೆಗಳಿಂದ 30 ಹಾಸಿಗೆಗಳವರೆಗೆ ಮೇಲ್ದರ್ಜೆಗೆ ಏರಿಸಲು ಸರ್ಕಾರದ ಉದ್ದೇಶವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಸದರಿ ದವಾಖಾನೆಯನ್ನು ಮೇಲ್ದರ್ಜೆಗೇರಿಸಲಾಗುವುದು?